ದಿನಾಂಕಃ 04-11-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ** ಪ್ರತಿವಾದಿ ಪರ ಶ್ರೀ ಸಿ ಎಲ್ ಎಂ ವಕೀಲರಿಂದ,

1) ನನ್ನ ತಂದೆಯ ಹೆಸರು ಡಿ. ಶಿವಪ್ಪ. ನನ್ನ ತಂದೆಗೆ ಮೂರು ಜನ ಸಹೋದರರು. ನನ್ನ ತಂದೆ ಜೊತೆಯಲ್ಲಿ ಶಿವಣ್ಣ, ಸೋಮಣ್ಣ @ ದೊಡ್ಡಯ್ಯ ಮತ್ತು ಸಿದ್ದಪ್ಪ ಎಂಬ ಸಹೋದರರು ಇರುತ್ತಾರೆ. ನನ್ನ ತಾತ ದೊಡ್ಡಯ್ಯ ರವರಿಗೆ ಇಬ್ಬರ ಸಹೋದರರು ಇದ್ದರು. ನನ್ನ ತಾತ ದೊಡ್ಡಯ್ಯರವರ ತಂದೆ ಹೆಸರು ಚನ್ನಬಸಪ್ಪ ಎಂದರೆ ಸರಿ. ಚನ್ನಬಸಪ್ಪ ರವರಿಗೆ ಮೂರು ಜನ ಗಂಡು ಮಕ್ಕಳು ಇಬ್ಬರು ಹೆಣ್ಣು ಮಕ್ಕಳು ಎಂದರೆ ಸರಿಯಲ್ಲ. ಚನ್ನಬಸಪ್ಪ ರವರಿಗೆ ದೊಡ್ಡಯ್ಯ, ಸಿದ್ದಯ್ಯ ಮತ್ತು ಚನ್ನಪ್ಪ ಎಂಬ ಮಕ್ಕಳು ಇದ್ದರು ಎಂದರೆ ಸರಿ. ಚನ್ನಪ್ಪ ಎಂಬುವರು ಪ್ರತಿವಾದಿಗಳ ತಾತ ಎಂದರೆ ಸರಿ. ಪ್ರತಿವಾದಿ ತಂದೆ ಹೆಸರು ಶಿವನಂಜಪ್ಪ ಎಂದರೆ ಸರಿ.

2) ಲಾಲನಹಳ್ಳಿ ಗ್ರಾಮದ ಸರ್ವೇ ನಂ. 283 ರಲ್ಲಿ 5 ಎಕರೆ 33 ಗುಂಟೆ ವಿಸ್ತೀರ್ಣ ಜಮೀನು ಇರುತ್ತದೆ ಎಂದರೆ ಸಾಕ್ಷಿಯು 7 ಎಕರೆ 10 ಗುಂಟೆ ಇರುತ್ತದೆ ಎಂದು ನುಡಿಯುತ್ತಾರೆ. 5 ಎಕರೆ 33 ಗುಂಟೆ ಪೈಕಿ 13 ಗುಂಟೆ ಖರಾಬು ಇರುತ್ತದೆ ಎಂದರೆ ಸರಿ. ದಿನಾಂಕ 20-06-1970 ರಂದು ನನ್ನ ತಂದೆ ಮತ್ತು ಸಿದ್ದಪ್ಪ ಮತ್ತು ದೊಡ್ಡಯ್ಯ ರವರು 9 ಗುಂಟೆ ವಿಸ್ತೀರ್ಣವನ್ನು ಪ್ರತಿವಾದಿ ತಂದೆ ಶಿವನಂಜಪ್ಪ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಮಾರಾಟ ಮಾಡಿರುವುದಿಲ್ಲ. ಆದರೆ, ಆಸ್ತಿಯನ್ನು ಬಿಟ್ಟುಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ 9 ಗುಂಟೆ ವಿಸ್ತೀರ್ಣದ ಆಸ್ತಿಯಲ್ಲಿ ಪ್ರತಿವಾದಿ ಸ್ವಾಧೀನ ಇರುತ್ತಾರೆ ಎಂದರೆ ಸರಿ.

3) ಸರ್ವೇ ನಂ. 283 ರಲ್ಲಿ ಇರುವ 1 ಎಕರೆ 3 ಗುಂಟೆ ಆಸ್ತಿಯನ್ನು ದೊಡ್ಡಯ್ಯ ರವರು ಪ್ರತಿವಾದಿಗೆ ದಿ 19/06/1997 ರಂದು ನೋಂದಾಯಿತ ಕ್ರಯ ಪತ್ರದ ಮೂಲಕ ಮಾರಟ ಮಾಡಿರುತ್ತಾರೆ ಎಂದರೆ ಸರಿ. ಸದರಿ 1 ಎಕರೆ 3 ಗುಂಟೆ ವಿಸ್ತೀರ್ಣದಲ್ಲಿ ಪ್ರತಿವಾದಿ ಚನ್ನಬಸಪ್ಪ ರವರು ಸ್ವಾಧೀನ ಇರುತ್ತಾರೆ ಎಂದರೆ ಸರಿ.

4) ದಿನಾಂಕ 05/10/1977 ರಂದು ಪ್ರತಿವಾದಿ ತಂದೆ ಶಿವನಂಜಪ್ಪ ರವರು ಸರ್ವೇ ನಂ.283 ರಲ್ಲಿ 1 ಎಕರೆ 15 ಗುಂಟೆ ಆಸ್ತಿಯನ್ನು ನಂಜಪ್ಪ @ ಕರಿಯಪ್ಪ ರವರಿಂದ ಖರೀದಿ ಮಾಡಿರುತ್ತಾರೆ ಎಂದರೆ ಸರಿ. ದಿನಾಂಕ 10/05/2002 ರಂದು ವಾದಿ 4 ಮತ್ತು ಇವರ ತಂದೆ ಸಿದ್ದಪ್ಪ ರವರು ಸರ್ವೇ ನಂ. 283/1 ಎ ರಲ್ಲಿ 1 ಎಕರೆ 5 ಗುಂಟೆ ಆಸ್ತಿಯನ್ನು ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸದರಿ ಆಸ್ತಿಯಲ್ಲಿ ಪ್ರತಿವಾದಿ ಸ್ವಾಧೀನ ಇರುತ್ತಾರೆ ಎಂದರೆ ಸರಿ.

5) ದಿನಾಂಕ 03/05/1973 ರಂದು ನನ್ನ ತಾಯಿ ಸರ್ವೇ ನಂ. 283 ರಲ್ಲಿ 1 ಎಕರೆ 6 ಗುಂಟೆ ಆಸ್ತಿಯನ್ನು ತಿಮ್ಮೆಗೌಡ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಿನಾಂಕ 10-06-1974 ರಂದು ನನ್ನ ತಂದೆ ಮತ್ತು ದೊಡ್ಡಯ್ಯ ರವರು ತಿಮ್ಮೆಗೌಡ ರವರಿಗೆ ಸರ್ವೇ ನಂ. 283 ರಲ್ಲಿ 20 ಗುಂಟೆ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ತಿಮ್ಮೆಗೌಡ ರವರು ಒಟ್ಟು 1 ಎಕರೆ 26 ಗುಂಟೆ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಾಯಿ ಮಾರಾಟ ಮಾಡಿರುವ ಕ್ರಯ ಪತ್ರವನ್ನು ಪರಿಶೀಲನೆ ಮಾಡಿರುವುದಿಲ್ಲ. ದಿನಾಂಕ 16/01/2002 ಮತ್ತು 24/01/2002 ರಂದು ತಿಮ್ಮೆಗೌಡ ರವರ ಮಕ್ಕಳು 1 ಎಕರೆ 26 ಗುಂಟೆ ಆಸ್ತಿಯನ್ನು ಅದಲು ಬದಲು ಪತ್ರವನ್ನು ಪ್ರತಿವಾದಿಗೆ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ.

6) ಪ್ರತಿವಾದಿ 5 ಎಕರೆ 33 ಗುಂಟೆ ಆಸ್ತಿಯಲ್ಲಿ ಸ್ವಾಧೀನ ಇರುತ್ತಾರೆ ಎಂದರೆ ಸರಿ. ಸದರಿ ಜಮೀನಿನಲ್ಲಿ ಪ್ರತಿವಾದಿ ವಾಸದ ಮನೆಯನ್ನು ನಿರ್ಮಿಸಿ, ತೆಂಗಿನ ತೋಟವನ್ನು ಬೆಳೆದಿರುತ್ತಾರೆ ಎಂದರೆ ಸರಿ. ಸರ್ವೇ ನಂ. 283 ರಲ್ಲಿ 7 ಎಕರೆ 10 ಗುಂಟೆ ಇರುವುದಿಲ್ಲ ಎಂದರೆ ಸರಿಯಲ್ಲ. 5 ಎಕರೆ 33 ಗುಂಟೆ ಆಸ್ತಿಯಲ್ಲಿ ನನಗೆ ಹಕ್ಕು ಮತ್ತು ಹಿತಾಸಕ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗೆ ತೊಂದರೆ ನೀಡುವ ಸಲುವಾಗಿ ಸುಳ್ಳು ದಾಖಲೆಗಳನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಗೆ 5 ಎಕರೆ 33 ಗುಂಟೆ ಆಸ್ತಿಗೆ ಖಾತೆ ಬದಲಾವಣೆ ಆಗಿರುತ್ತೆ ಎಂದರೆ ಅಕ್ರಮವಾಗಿ ಮಾಡಿಕೊಂಡಿರುತ್ತಾರೆ

ಎಂದು ನುಡಿಯುತ್ತಾರೆ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಃಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರಧನ್ಯಾದಂ., ಕೆ.ಆರ್.ನಗರ